# All India Radio: Bangalore
# National Bulletin In Kannada
# 05.02.2026 1935 hrs
# ಆಕಾಶವಾಣಿ, ಬೆಂಗಳೂರು

## ರಾಷ್ಟ್ರೀಯ ವಾರ್ತೆಗಳು

*****************

ಮುಖ್ಯಾಂಶಗಳು

1. ಗದ್ದಲದ ನಡುವೆ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯ ಅಂಗೀಕರಿಸಿದ ಲೋಕಸಭೆ
2. ಆತ್ಮವಿಶ್ವಾಸ, ನಿರ್ಣಾಯಕ ನೀತಿ ಸುಧಾರಣೆಗಳೊಂದಿಗೆ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವತ್ತ ಭಾರತ – ಪ್ರಧಾನಿ ನರೇಂದ್ರ ಮೋದಿ
3. 'ಭಾರತ್ ಟ್ಯಾಕ್ಸಿ' ಆ್ಯಪ್‌ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ
4. ಡಬ್ಲ್ಯೂಪಿಎಲ್ ಟಿ–20 ಕ್ರಿಕೆಟ್; ಫೈನಲ್‌ನಲ್ಲಿಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ

*****************

ಭಾರತ–ಅಮೆರಿಕಾ ವ್ಯಾಪಾರ ಒಪ್ಪಂದ ಸೇರಿದಂತೆ ವಿವಿಧ ವಿಷಯಗಳ ಕುರಿತು ವಿರೋಧ ಪಕ್ಷಗಳ ಗದ್ದಲದಿಂದಾಗಿ ಇಂದು ಲೋಕಸಭೆ ಕಲಾಪಕ್ಕೆ ಪದೇ ಪದೆ ಅಡ್ಡಿ ಉಂಟಾಯಿತು. ಗದ್ದಲದ ನಡುವೆಯೇ ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಧ್ವನಿಮತದೊಂದಿಗೆ ಸದನ ಅಂಗೀಕರಿಸಿತು.

ಮೂರನೇ ಮುಂದೂಡಿಕೆಯ ನಂತರ ಮಧ್ಯಾಹ್ನ 3 ಗಂಟೆಗೆ ಸದನ ಸೇರಿದಾಗ ವಿರೋಧ ಪಕ್ಷದ ಸಂಸದರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಸದನದ ಬಾವಿಗಿಳಿದು ಪ್ರತಿಭಟಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ವಿರೋಧ ಪಕ್ಷಗಳ ಸಂಸದರ ನಡುವಳಿಕೆಯು ಸಂಸತ್ತಿನ ಇತಿಹಾಸದಲ್ಲೇ ಒಂದು ಕಪ್ಪು ಚುಕ್ಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಗದ್ದಲ ಮುಂದುವರೆದ ಹಿನ್ನೆಲೆಯಲ್ಲಿ ಲೋಕಸಭಾಧ್ಯಕ್ಷರು ಕಲಾಪವನ್ನು ನಾಳೆ ಬೆಳಗ್ಗೆ 11 ಗಂಟೆಗೆ ಮುಂದೂಡಿದರು.

ಇದಕ್ಕೂ ಮುನ್ನ ಎರಡನೇ ಮುಂದೂಡಿಕೆ ನಂತರ ಸದನ ಸೇರಿದಾಗ ವಿರೋಧ ಪಕ್ಷದ ಸದಸ್ಯರು ವಿವಿಧ ವಿಷಯಗಳು ಕುರಿತು ಘೋಷಣೆ ಕೂಗಲು ಆರಂಭಿಸಿದರು. ಸುಗಮ ಕಲಾಪಕ್ಕೆ ಅವಕಾಶ ನೀಡುವಂತೆ ಲೋಕಸಭಾಧ್ಯಕ್ಷರು ಪ್ರತಿಭಟನಾನಿರತ ಸದಸ್ಯರಿಗೆ ಮನವಿ ಮಾಡಿದರು. ಆದರೂ ಗದ್ದಲ ಮುಂದುವರೆದಾಗ ಸದನವನ್ನು ಮುಂದೂಡಲಾಯಿತು.

ಇದಕ್ಕೂ ಮೊದಲು, ಮೊದಲ ಮುಂದೂಡಿಕೆ ನಂತರ ಮಧ್ಯಾಹ್ನ 12 ಗಂಟೆಗೆ ಸದನ ಸೇರಿದಾಗ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ರಾಷ್ಟ್ರಪತಿ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿದರು.

ವಂದನಾ ನಿರ್ಣಯದ ಮೇಲೆ ವಿರೋಧ ಪಕ್ಷದ ಹಲವು ಸದಸ್ಯರು ಮಂಡಿಸಿದ ತಿದ್ದುಪಡಿಗಳನ್ನು ಅವರು ಮತಕ್ಕೆ ಹಾಕಿದರು. ಆದರೆ, ಅವುಗಳನ್ನು ಸದನ ತಿರಸ್ಕರಿಸಿತು. ಪ್ರತಿಪಕ್ಷಗಳ ಗದ್ದಲದ ನಡುವೆ ಲೋಕಸಭೆಯು ವಂದನಾ ನಿರ್ಣಯವನ್ನು ಅಂಗೀಕರಿಸಿತು.

*****************

ಭಾರತವು ಜಾಗತಿಕ ಮಟ್ಟದಲ್ಲಿ ಸ್ಪರ್ಧೆಗೆ ಸಂಪೂರ್ಣವಾಗಿ ಸಜ್ಜಾಗಿದೆ. ಆತ್ಮವಿಶ್ವಾಸ ಮತ್ತು ನಿರ್ಣಾಯಕ ನೀತಿ ಸುಧಾರಣೆಗಳೊಂದಿಗೆ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವತ್ತ ಭಾರತ ಸಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ರಾಜ್ಯಸಭೆಯಲ್ಲಿಂದು ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಕೇಂದ್ರ ಸರ್ಕಾರವು ಸುಧಾರಣೆ, ಕಾರ್ಯಕ್ಷಮತೆ ಮತ್ತು ಪರಿವರ್ತನೆಯ ದೃಷ್ಟಿಕೋನದೊಂದಿಗೆ ಮುಂದುವರೆದಿದೆ ಎಂದು ತಿಳಿಸಿದರು.

ಧ್ವನಿ: ಪ್ರಧಾನಿ ಮೋದಿ

ಐರೋಪ್ಯ ಒಕ್ಕೂಟ, ಅಮೆರಿಕಾ ಸೇರಿದಂತೆ ಹಲವಾರು ದೇಶಗಳೊಂದಿಗೆ ಸಹಿ ಹಾಕಿದ ವ್ಯಾಪಾರ ಒಪ್ಪಂದದ ಕುರಿತು ಮಾತನಾಡಿದ ಪ್ರಧಾನಿ ಮೋದಿ, ಭಾರತ 9 ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಿದೆ. ಇತ್ತೀಚೆಗೆ ಯುರೋಪಿಯನ್ ಒಕ್ಕೂಟದ 27 ದೇಶಗಳೊಂದಿಗೆ ಒಪ್ಪಂದವನ್ನು ಪೂರ್ಣಗೊಳಿಸಿದೆ ಎಂದರು.

ದೇಶವು ಬಲವಾದ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿದೆ. ಯುವ ಪ್ರತಿಭಾನ್ವಿತರನ್ನು ದೇಶ ಹೊಂದಿದ್ದು ಜಗತ್ತು ಭಾರತದತ್ತ ಭರವಸೆಯಿಂದ ನೋಡುತ್ತಿದೆ. ಜಗತ್ತು ನೂತನ ಜಾಗತಿಕ ಕ್ರಮದತ್ತ ವೇಗವಾಗಿ ಸಾಗುತ್ತಿದೆ. ಅನೇಕ ದೇಶಗಳೊಂದಿಗೆ ವಿಶ್ವಾಸಾರ್ಹ ಪಾಲುದಾರನಾಗಿ ಭಾರತ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

*****************

ಭಾರತ-ಅಮೆರಿಕಾ ನಡುವಿನ ಐತಿಹಾಸಿಕ ವ್ಯಾಪಾರ ಒಪ್ಪಂದವು ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಅವರು, ಈ ವ್ಯಾಪಾರ ಒಪ್ಪಂದವು ಭಾರತ-ಅಮೆರಿಕಾ ದ್ವಿಪಕ್ಷೀಯ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ. ಭಾರತದ ನಿರ್ಣಾಯಕ ಖನಿಜ ಸಹಕಾರವು ವೇಗವಾಗಿ ಮುಂದುವರೆಯುತ್ತಿದೆ ಎಂದು ಹೇಳಿದ್ದಾರೆ.

ತಮ್ಮ ಇತ್ತೀಚಿನ ಅಮೆರಿಕಾ ಭೇಟಿಯು ಉತ್ಪಾದಕ ಮತ್ತು ಸಕಾರಾತ್ಮಕವಾಗಿತ್ತು ಎಂದು ಇದೇ ವೇಳೆ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ.

*****************

ಭಾರತ ಮತ್ತು ಅಮೆರಿಕಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಭಾಗ ಸಿದ್ಧವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ ಮುಂದಿನ ಸುಮಾರು 4 ರಿಂದ 5 ದಿನಗಳಲ್ಲಿ ಉಭಯ ದೇಶಗಳ ನಡುವಿನ ಜಂಟಿ ಹೇಳಿಕೆಯನ್ನು ಅಂತಿಮಗೊಳಿಸಿ, ಸಹಿ ಹಾಕುವ ನಿರೀಕ್ಷೆಯಿದೆ. ಜಂಟಿ ಹೇಳಿಕೆಗೆ ಸಹಿ ಹಾಕಿದ ನಂತರ ಸುಂಕವನ್ನು ಶೇಕಡ 18ಕ್ಕೆ ಇಳಿಸಲು ಅಮೆರಿಕಾ ಕಾರ್ಯಕಾರಿ ಆದೇಶವನ್ನು ಹೊರಡಿಸಲಿದೆ ಎಂದು ತಿಳಿಸಿದರು.

ಜಂಟಿ ಹೇಳಿಕೆಯ ನಂತರ ಔಪಚಾರಿಕ ಒಪ್ಪಂದವನ್ನು ಸಹ ರಚಿಸಲಾಗುವುದು. ಇದಕ್ಕೆ ಮಾರ್ಚ್ ಮಧ್ಯ ಭಾಗದ ವೇಳೆಗೆ ಸಹಿ ಹಾಕುವ ನಿರೀಕ್ಷೆ ಇದೆ ಎಂದು ಸಚಿವ ಪಿಯೂಶ್ ಗೋಯಲ್ ಮಾಹಿತಿ ನೀಡಿದರು.

*****************

ಭಾರತದ ಮೊದಲ ಸಹಕಾರಿ ಆಧಾರಿತ 'ಭಾರತ್ ಟ್ಯಾಕ್ಸಿ' ಆ್ಯಪ್ ಅನ್ನು ನವದೆಹಲಿಯಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧಿಕೃತವಾಗಿ ಉದ್ಘಾಟಿಸಿದರು.

ಭಾರತ ಟ್ಯಾಕ್ಸಿ ವಿವಿಧ ರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರ ಅಡಿಯಲ್ಲಿ ನೋಂದಾಯಿಸಲಾದ ಭಾರತದ ಮೊದಲ ಸಹಕಾರಿ ನೇತೃತ್ವದ ಚಾಲನಾ ನಿರ್ವಹಣೆ ಆ್ಯಪ್ ಆಗಿದೆ. ಇದು ಶೂನ್ಯ ಕಮೀಷನ್ ಮತ್ತು ಹೆಚ್ಚುವರಿ ಶುಲ್ಕ ರಹಿತವಾಗಿ ಹಾಗೂ ಚಾಲಕರಿಗೆ ಲಾಭದ ನೇರ ವಿತರಣೆಯೊಂದಿಗೆ ವಿದೇಶಿ ಹೂಡಿಕೆ ಆಧಾರಿತ ಸಂಗ್ರಹಕ ವೇದಿಕೆಗಳಿಗೆ ಸ್ಥಳೀಯ ಪರ್ಯಾಯವನ್ನು ಪ್ರಸ್ತುತಪಡಿಸುತ್ತದೆ.

ಸಭೆ ಉದ್ದೇಶಿಸಿ ಮಾತನಾಡಿದ ಸಚಿವ ಅಮಿತ್ ಶಾ, ಕೇಂದ್ರ ಸರ್ಕಾರವು ಟ್ಯಾಕ್ಸಿ ಸೇವಾ ವಲಯವನ್ನು ಪ್ರವೇಶಿಸುತ್ತಿಲ್ಲ. ಆದರೆ ಸಹಕಾರ ಸಂಸ್ಥೆಯಿಂದ ಇದರಲ್ಲಿ ತೊಡಗಿಸಿಕೊಳ್ಳುತ್ತಿದೆ. ಸಹಕಾರಿ ಟ್ಯಾಕ್ಸಿ ಸೇವೆಯು ಚಾಲಕರನ್ನು ಬೆಂಬಲಿಸುತ್ತದೆ. ಅವರ ಗಳಿಕೆಯನ್ನು ಹೆಚ್ಚಿಸುತ್ತದೆ. ಭಾರತ ಟ್ಯಾಕ್ಸಿ ಚಾಲಕರು ಗಳಿಸುವ ದರಗಳ ಮೇಲೆ ಯಾವುದೇ ಕಮಿಷನ್ ವಿಧಿಸುವುದಿಲ್ಲ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಡಿಜಿಟಲ್ ಸಬಲೀಕರಣ, ಸುರಕ್ಷತೆ ಮತ್ತು ಸೇವಾ ವಿತರಣೆಯನ್ನು ಬಲಪಡಿಸಲು ಪ್ರಮುಖ ಸಾರ್ವಜನಿಕ ಖಾಸಗಿ ಪಾಲುದಾರರೊಂದಿಗೆ 9 ತಿಳುವಳಿಕೆ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

*****************

140 ಕೋಟಿ ಭಾರತೀಯರ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಕೇಂದ್ರ ಸರ್ಕಾರದ ಆದ್ಯತೆಯಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ವಸ್ತುನಿಷ್ಠ ಮಾರುಕಟ್ಟೆ ಪರಿಸ್ಥಿತಿಗಳು ಮತ್ತು ವಿಕಸನಗೊಳ್ಳುತ್ತಿರುವ ಅಂತಾರಾಷ್ಟ್ರೀಯ ಚಲನಶೀಲತೆಗೆ ಅನುಗುಣವಾಗಿ ದೇಶದ ಇಂಧನ ಮೂಲವನ್ನು ವಿಸ್ತರಿಸುವುದು ಸರ್ಕಾರದ ಕಾರ್ಯತಂತ್ರವಾಗಿದೆ ಎಂದು ತಿಳಿಸಿದರು.

ವೆನಿಜುಲಾದಿಂದ ತೈಲ ಆಮದು ಕುರಿತು ಸುದ್ದಿಗಾರರ ಪ್ರಶ್ನೊಂದಕ್ಕೆ ಉತ್ತರಿಸಿದ ರಣಧೀರ್ ಜೈಸ್ವಾಲ್, ವ್ಯಾಪಾರ ಮತ್ತು ಹೂಡಿಕೆಗಳನ್ನು ಒಳಗೊಂಡ ಇಂಧನ ವಲಯದಲ್ಲಿ ಭಾರತ ಮತ್ತು ವೆನಿಜುಲಾ ದೀರ್ಘಕಾಲದ ಪಾಲುದಾರ ರಾಷ್ಟ್ರಗಳಾಗಿವೆ. 2019–20ರವರೆಗೆ ವೆನಿಜುಲಾ, ಭಾರತದ ಪ್ರಮುಖ ಕಚ್ಚಾ ತೈಲ ಮೂಲಗಳಲ್ಲಿ ಒಂದಾಗಿತ್ತು. ನಿರ್ಬಂಧಗಳ ಕಾರಣ ಆಮದು ಸ್ಥಗಿತಗೊಂಡಿತ್ತು. 2023–24ರಲ್ಲಿ ಪುನಃ ಆಮದು ಆರಂಭಿಸಲಾಯಿತು. ಆದರೆ, ಮತ್ತೆ ನಿರ್ಬಂಧಗಳ ಕಾರಣ ಆಮದು ಸ್ಥಗಿತಗೊಂಡಿದೆ ಎಂದು ವಿವರಿಸಿದರು.

ಇಂಧನ ಭದ್ರತೆಗೆ ದೇಶದ ಅವಶ್ಯಕತೆಗೆ ಅನುಗುಣವಾಗಿ ವೆನಿಜುಲಾ ಸೇರಿದಂತೆ ಯಾವುದೇ ಕಚ್ಚಾ ತೈಲ ಪೂರೈಕೆ ರಾಷ್ಟ್ರಗಳಿಂದ ತೈಲ ಆಮದಿಗೆ ಭಾರತ ಮುಕ್ತವಾಗಿದೆ ಎಂದು ರಣಧೀರ್ ಜೈಸ್ವಾಲ್ ಹೇಳಿದರು.

*****************

ವಿಶ್ವದ ಅತಿದೊಡ್ಡ ಪ್ಲಾಸ್ಟಿಕ್ ಪ್ರದರ್ಶನಗಳಲ್ಲಿ ಒಂದಾದ 'ಪ್ಲಾಸ್ಟಿಂಡಿಯಾ 2026' ಇಂದು ನವದೆಹಲಿಯ ಭಾರತ್ ಮಂಟಪದಲ್ಲಿ ಆರಂಭವಾಯಿತು. ಆರು ದಿನಗಳ ಕಾಲ ನಡೆಯಲಿರುವ ಈ ಬೃಹತ್ ಮೇಳವು ಭಾರತವನ್ನು ಉತ್ಪಾದನಾ ಕೇಂದ್ರವನ್ನಾಗಿ ಮಾಡುವ ಮತ್ತು ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿದೆ.

ಈ ಬಾರಿಯ ಪ್ರದರ್ಶನವು 'ಭಾರತ್ ನೆಕ್ಸ್ಟ್' ಎಂಬ ವಿಷಯದ ಅಡಿಯಲ್ಲಿ ನಡೆಯುತ್ತಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ 'ವಿಕಸಿತ್ ಭಾರತ' ಮತ್ತು 'ಆತ್ಮನಿರ್ಭರ ಭಾರತ'ದ ಕನಸಿಗೆ ಪೂರಕವಾಗಿದೆ. ಸ್ವಾವಲಂಬಿ ಕೈಗಾರಿಕಾ ಅಡಿಪಾಯವನ್ನು ನಿರ್ಮಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ವೇಗ ನೀಡುವುದು ಈ ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ.

*****************

ದೇಶಾದ್ಯಂತ ಪರೀಕ್ಷೆಗಳು ಹತ್ತಿರವಾಗುತ್ತಿದ್ದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ  ಅತ್ಯಂತ ಮಹತ್ವಾಕಾಂಕ್ಷೆಯ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮ ಮತ್ತೆ ಬಂದಿದೆ. ಈ ಬಾರಿ ಪ್ರಧಾನಿಯವರು ದೇವಮೊಗ್ರ, ಕೊಯಮತ್ತೂರು, ರಾಯಪುರ, ಗುವಾಹತಿ ಮತ್ತು ದೆಹಲಿಯ 7 ಕಲ್ಯಾಣ ಮಾರ್ಗದಲ್ಲಿ ಪರೀಕ್ಷಾ ಯೋಧರೊಂದಿಗೆ ವಿಶೇಷ ಸಂವಾದ ನಡೆಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಕುರಿತ ಭಯ ನಿವಾರಣೆ ಹಾಗೂ ಅವರನ್ನು ಪರೀಕ್ಷೆಗಳನ್ನು ಎದುರಿಸಲು ಮಾನಸಿಕವಾಗಿ ಸಜ್ಜುಗೊಳಿಸಿ ಉತ್ತೇಜನ ನೀಡುವ ಪರೀಕ್ಷಾ ಪೇ ಚರ್ಚಾದ ವಿಶೇಷ ಸಂಚಿಕೆ ನಾಳೆ ಪ್ರಸಾರವಾಗಲಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿಯವರು, ಪ್ರತಿಬಾರಿಯಂತೆ ಯುವ ಸ್ನೇಹಿತರೊಂದಿಗೆ ಸಂವಹನ ನಡೆಸುವುದು ಮತ್ತು ಒತ್ತಡರಹಿತ ಪರೀಕ್ಷೆಗಳು ಹಾಗೂ ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸುವುದು ಉಲ್ಲಾಸಕರವಾಗಿದೆ ಎಂದು ಹೇಳಿದ್ದಾರೆ.

*****************

ಮಹಿಳೆಯರ ಪ್ರೀಮಿಯರ್ ಲೀಗ್–ಡಬ್ಲ್ಯೂಪಿಎಲ್ ಟಿ–20 ಕ್ರಿಕೆಟ್ ಪಂದ್ಯಾವಳಿಯ ಫೈನಲ್‌ನಲ್ಲಿ ಇಂದು ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಿವೆ.

ವಡೋದರದ ಬಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

********ಮುಕ್ತಾಯ*******